IB DIPLOMA PROGRAMME
PROGRAMME DU DIPLÔME DU BI
PROGRAMA DEL DIPLOMA DEL BI

# KANNADA A1 – STANDARD LEVEL – PAPER 1
# KANNADA A1 – NIVEAU MOYEN – ÉPREUVE 1
# KANNADA A1 – NIVEL MEDIO – PRUEBA 1

Monday 19 May 2003 (morning)
Lundi 19 mai 2003 (matin)
Lunes 19 de mayo de 2003 (mañana)

1 hour 30 minutes / 1 heure 30 minutes / 1 hora 30 minutos

## INSTRUCTIONS TO CANDIDATES

- Do not open this examination paper until instructed to do so.
- Write a commentary on one passage only. It is not compulsory for you to respond directly to the guiding questions provided. However, you may use them if you wish.

## INSTRUCTIONS DESTINÉES AUX CANDIDATS

- Ne pas ouvrir cette épreuve avant d'y être autorisé.
- Rédiger un commentaire sur un seul des passages. Le commentaire ne doit pas nécessairement répondre aux questions d'orientation fournies. Vous pouvez toutefois les utiliser si vous le désirez.

## INSTRUCCIONES PARA LOS ALUMNOS

- No abra esta prueba hasta que se lo autoricen.
- Escriba un comentario sobre un solo fragmento. No es obligatorio responder directamente a las preguntas que se ofrecen a modo de guía. Sin embargo, puede usarlas si lo desea.

ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದರ ಬಗೆಗೆ ನಿಮ್ಮ ಅನಿಸಿಕೆಗಳನ್ನು ಬರೆಯಿರಿ. ನಿಮ್ಮ ಅನಿಸಿಕೆಗಳು ಇಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ನೇರ ಉತ್ತರಗಳಾಗಿರಲೇಬೇಕಾಗಿಲ್ಲ. ಅವುಗಳನ್ನು ನಿಮ್ಮ ಬರೆಹಕ್ಕೆ ಪೀಠಿಕೆಯಾಗಿ ನೀವು ಉಪಯೋಗಿಸಬಹುದು.

1 (ಅ). ಶತಶತಮಾನಗಳ ಹಿಂದೆ, ಮಾನವನಲ್ಲಿ ಆತ್ಮಪ್ರಜ್ಞೆ ಅರಳಿ ಅವನು ತನ್ನ ಸುತ್ತಲ ಪ್ರಪಂಚವನ್ನು ಕುತೂಹಲದಿಂದ ನೋಡಲಾರಂಭಿಸಿದಾಗ ಅವನಿಗೆ ಕಂಡದ್ದೇನು? ಅಗ್ನಿ ಪರ್ವತಗಳಿಂದ ಭುಗಿಲೆದ್ದು ಗಗನಕ್ಕೆ ಏರುತ್ತಿರುವ ಜ್ವಾಲೆ : ಕಾದು ಕರಗಿ ಉಕ್ಕಿ ತನ್ನ ದಾರಿಯಲ್ಲಿ ಸಿಕ್ಕಿದ್ದನ್ನೆಲ್ಲ ಸುಟ್ಟು ಹರಿಯುತ್ತಿರುವ ಲಾವಾರಸ; ಮೋಡದ ದಟ್ಟಣೆಯನ್ನು ಇರಿದಿರಿದು ಕಣ್ಣುಕೋರೈಸುವ ಮಿಂಚು; ಕಾಳ್ಗಿಚ್ಚಿನಿಂದ ಭಸ್ಮವಾಗುತ್ತಿರುವ ಕಾಡು; ಕ್ಷುಬ್ಧ[1]ವಾದ ಸಮುದ್ರ; ಅದರ ತೀರದ ಮೇಲೆ ಅಪ್ಪಳಿಸುವ ಅಲೆಗಳು; ಇವುಗಳ ಜೊತೆಗೆ ಗುಡುಗಿನ ಆರ್ಭಟ, ಸಿಡಿಲಿನ ಹೊಡೆತ. "ಈ ಭಯಂಕರ ಪ್ರಪಂಚದಲ್ಲಿ ನಾನು ಹೇಗೆ ತಾನೆ ಬದುಕಿಯೇನು?" ಎಂದು ಅವನು ತಲ್ಲಣಿಸಿರಬೇಕು[2].

ಹೀಗೆ ಪ್ರಕೃತಿಯ ರೋಷವನ್ನೂ ಅದರ ಮಾರಕ ಪರಿಣಾಮವನ್ನೂ ನೋಡಿದ ಮಾನವನೇ ಅದರ ಮತ್ತೊಂದು ಮುಖವನ್ನೂ ನೋಡಿದ: ಸೂರ್ಯೋದಯ ಸೂರ್ಯಾಸ್ತಗಳ ಬಣ್ಣದ ಸಿರಿ; ಕಾಮನಬಿಲ್ಲಿನ ಸೊಬಗು; ಮಳೆಯಿಂದ (ಆ ಮಳೆ ಗುಡುಗು ಸಿಡಿಲುಗಳ ಜೊತೆಗೇ ಬಂದದ್ದು ತೋಯ್ದು[3] ಕಾಡಿನಲ್ಲೂ ಬಯಲಿನಲ್ಲೂ ಹಸುರಿನ ಹಬ್ಬ : ಗಾಳಿಯಲ್ಲಿ ನಲಿದಾಡುವ ಹೂವುಗಳ ಕೋಮಲತೆ, ಸುಗಂಧ; ರಾತ್ರಿಯ ಆಕಾಶದಲ್ಲಿ ಮಿನುಗುವ ನಕ್ಷತ್ರಗಳು, ಅವುಗಳ ನಡುವಿನ ರಹಸ್ಯಪೂರ್ಣ ನೀಲಿಯಾಳ; ಜಗತ್ತಿಗೆಲ್ಲ ಸೌಮ್ಯಸೌಂದರ್ಯವನ್ನು ಕೊಟ್ಟು ತಂಪೆರೆಯುವ ಬೆಳುದಿಂಗಳು; ಸಮುದ್ರದ ಪಾರವಿಲ್ಲದ ಹರವು, ಗಾಂಭೀರ್ಯ...

ಮೊದಲು ಕ್ರೂರವಾಗಿದ್ದ ಪ್ರಕೃತಿಯೇ ಈಗ ಪ್ರಸನ್ನವಾಗಿದೆ. ಆಗಿನ ಮುಗ್ಧಮಾನವನಿಗೆ ಇದನ್ನು ಕಂಡು ಆಶ್ಚರ್ಯ, ಸಂತೋಷ. ಅದು ಒಂದು ಬಗೆಯ ಮೂಕ ಅನುಭವ: ಅವನು ಅದನ್ನು ಬಣ್ಣಿಸಲಾರ, ವಿಶ್ಲೇಷಿಸಲಾರ. ಈ ರುದ್ರಸುಂದರ, ಭೀಷಣಪ್ರಸನ್ನ, ಪ್ರಪಂಚದ ವ್ಯಾಪಾರ—ಅವನಿಗೆ ಅದೊಂದು ಒಗಟೆ. ಇದೆಲ್ಲ ಯಾರ ಕೆಲಸ? ಯಾವ ಗಾರುಡಿಯ, ಯಾವ ಮಾಯಮಂತ್ರದ ಫಲ? ಇದರ ಹಿಂದೆ ಭವ್ಯವಾದದ್ದು ಏನೋ ಇರಬೇಕು.

ಅದು (ಅಥವಾ ಅವನು) ಶತ್ರುವೋ ಮಿತ್ರನೋ ಆದರದು ಚಂಚಲ ಮನೋವೃತ್ತಿ. ಈ ಘಳಿಗೆ ಮೈದಡವುತ್ತಿರುವ ತಂಗಾಳಿ ಮರುಘಳಿಗೆ ಸುಂಟರಗಾಳಿಯಾಗಬಹುದು. ನಿಂತ ನೆಲ ಬಾಯ್ದೆರೆಯಬಹುದು! ಪ್ರಕೃತಿ ವ್ಯಾಪಾರದ ಹಿಂದೆ ಒಂದು ಶಕ್ತಿ ಇದೆ ಎಂದು ಈಚಿನ ತತ್ವಜ್ಞರು ಹೇಳುವ ಮಾತು ಬಹುಶಃ ಆದಿಮಾನವನಿಗೆ ಹೊಳೆಯುತ್ತಿರಲಿಲ್ಲ. ಅವನ ಮನಸ್ಸು ಬಲಶಾಲಿಯಾದ ಯಾವುದೋ ಒಂದು ವಸ್ತುವನ್ನು ಅಥವಾ ವ್ಯಕ್ತಿಯನ್ನು ಕಲ್ಪಿಸಿಕೊಳ್ಳಲ್ಲದು: ಅಮೂರ್ತವಾದ(abstract ) ಶಕ್ತಿಯನ್ನಲ್ಲ. ಹಾಗೆ ಕಲ್ಪಿಸಿಕೊಂಡ ವಸ್ತುವಿನ ಅಥವಾ ವ್ಯಕ್ತಿಯ ವ್ಯಾಪಾರವೆಲ್ಲ ಮಾಯಮಂತ್ರದ ಕೆಲಸ.

ಬಹುಶಃ ಇಂಥದೇನೋ ಇರಬೇಕು— ದೇವರು ಎಂಬ ಕಲ್ಪನೆಯ ಪೂರ್ವ ಇತಿಹಾಸ.

[ಮೂರ್ತಿರಾವ, ಎ. ಎನ ; ದೇವರು, 1991]

1) ಕುದಿಯುವ

2) ಆತಂಕ

3) ಒದ್ದೆಯಾದ

– ನಿಮಗೆನಿಸುವಂತೆ, ಈ ಗದ್ಯಭಾಗದ ಸಂದೇಶವೇನು?

– ಈ ಗದ್ಯಭಾಗದಲ್ಲಿ ಬಂದಿರುವಂತೆ, ಪ್ರಕೃತಿಯ ವೈಶಿಷ್ಟ್ಯಗಳನ್ನು ವಿವರಿಸಿ.

– ಈ ಗದ್ಯಭಾಗದ ರಚನಾ ವಿಧಾನವು ಓದುಗನಿಗೆ ಅರ್ಥವನ್ನು ಹೇಗೆ ಸಂವಹನ ಮಾಡುತ್ತದೆ?

– ಕೊನೆಯ ವಾಕ್ಯದ ವೈಶಿಷ್ಟ್ಯವನ್ನು ಒಟ್ಟು ಬರೆಹದ ಅರ್ಥವಂತಿಕೆಯ ಹಿನ್ನೆಲೆಯಲ್ಲಿ ಪರಿಶೀಲಿಸಿ.

1 (ಆ)

## ಕಾಣಿಕೆ

ಮೊದಲು ತಾಯಿಯ ಹಾಲ ಕುಡಿದು,
ಲಲ್ಲೆಯಿಂದ[1] ತೊದಲ ನುಡಿದು,
ಕೆಳೆಯರೊಡನೆ[2] ಬೆಳೆದು ಬಂದ
ಮಾತದಾವುದು—
ನಲ್ಲೆಯೊಲವ[3] ತೆರೆದು ತಂದ
ಮಾತದಾವುದು—

ಸವಿಯ ಹಾಡ, ಕಥೆಯ ಕಟ್ಟಿ,
ಕಿವಿಯಲೆರೆದು, ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು—
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು—
ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ[4] ಹಣ್ಣು:
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು:
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು.

ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು ಕಣ್ಣು,
ನಲಿಸಿ, ಕಲಿಸಿ, ಮನವನೊಲಿಸಿ
ಕುಣಿಸುತಿರುವಳು:
ಒಮ್ಮೆ ಇವಳು, ಒಮ್ಮೆ ಅವಳು,
ಕುಣಿಸುತಿರುವಳು

ಹೀಗೆ ನನಗೆ ಹಬ್ಬವಾಗಿ
ಇನಿಯರಿಬ್ಬರನ್ನು ತಾಗಿ
ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ:
ಅವಳ ತೊಡಿಗೆ ಇವಳಿಗಿಟ್ಟು,
ಹಾಡ ಬಯಸಿದೆ.

[ಶ್ರೀಕಂಠಯ್ಯ.ಬಿ.ಎಂ, "ಇಂಗ್ಲಿಷ್ ಗೀತಗಳು" ಸಂಕಲನದಿಂದ (1926)]

1) ಪ್ರೀತಿ
2) ಗೆಳೆಯರು
3) ಪ್ರಿಯತಮೆ
4) ಪ್ರೀತಿಯ

– ಈ ಕವಿತೆಯಲ್ಲಿ ವ್ಯಕ್ತವಾಗಿರುವ ಮಾತೃಭಾಷೆಯ ಪ್ರೇಮ ಯಾವ ಬಗೆಯದು?

– ಕವಿಯು ತನ್ನ ಎರಡನೆಯ ಪ್ರೀತಿಯ ಬಗ್ಗೆ ಓದುಗರನ್ನು ಹೇಗೆ ಚಕಿತಗೊಳಿಸುತ್ತಾರೆ?

– ಕವಿತೆಯ ಪದ ಸಂಪತ್ತಿನ ಬಗ್ಗೆ ವಿವರಿಸಿ.

– ಕೊನೆಯ ಪ್ಯಾರಾದ ಮಹತ್ವವನ್ನು ಪರಿಶೀಲಿಸಿರಿ.

---